**ಬಣ್ಣಗಳೆಷ್ಟು ಮತ್ತು ಕೆಡಿಸಿದ ಬಣ್ಣಗಳೆಷ್ಟು' ಅಂತ ಒಂದು ಪ್ರಶ್ನೆಯನ್ನು ನಿಮ್ಮದೊಂದು ಲೇಖನದಲ್ಲಿ ಎತ್ತಿದ್ದೀರಿ. ಇಂಥದ್ದೊಂದು ಪ್ರಶ್ನೆಯನ್ನು ಯಾಕೆ ಹಾಕಿಕೊಳ್ಳಬೇಕೆನಿಸಿತು?**

ಇದನ್ನು ಒಂದು ನಿರ್ದಿಷ್ಟವಾದ ಕಾಲಘಟ್ಟದಲ್ಲಿ ಪ್ರಸ್ತುತವಾದ ಪ್ರಶ್ನೆಯಾಗಿ ನಾನು ಎತ್ತಿರಬಹುದು. ಅಂದರೆ ನವ್ಯ ವಿಮರ್ಶೆಯ ಹಿನ್ನೆಲೆಯಲ್ಲಿ. ನವ್ಯ ಲೇಖಕರಲ್ಲಿ ಬಹುತೇಕರು ಮಾರ್ಕ್ಸಿಸ್ಟ್ ಚಿಂತನೆಯನ್ನು ಸಾರಾಸಗಟಾಗಿ ನಿರಾಕರಿಸಿದರು. ಅದರ ಕವಲಾದ ಸಮಾಜವಾದದ ಬಗ್ಗೆ ಕೆಲವರು ಆಸಕ್ತಿ ತೋರಿದರು. ಇನ್ನು ಕೆಲವರು ನವಮಾನವತಾವಾದವನ್ನು ಬೆಂಬಲಿಸಿದರು. 'ಯಾವುದಾದರೂ ಸರಿ, ಆದರೆ ಮಾರ್ಕ್ಸ್‌ವಾದ ಬೇಡ' ಅನ್ನುವ ನಿಲುವಿನವರೇ ಹೆಚ್ಚಾಗಿ ಇದ್ದರು. ಸು.ರಂ. ಎಕ್ಕುಂಡಿ ಅಂಥವರೂ ಇದ್ದರು. ಮಾರ್ಕ್ಸ್ ಮತ್ತು ಮಾಧ್ವ ಫಿಲಾಸಫಿಯನ್ನು ಒಟ್ಟಿಗೆ ನೋಡುತ್ತಿದ್ದವರು. ನಿರಂಜನ ಮತ್ತು ಅನಂತಮೂರ್ತಿ ಅವರ ನಡುವಿನ ಸ್ನೇಹದ ಅವಧಿಯೊಂದಿದೆ ಮತ್ತು ಆ ಸ್ನೇಹ ವಿರೋಧವಾಗಿ ಮಾರ್ಪಟ್ಟ ಅವಧಿಯೊಂದಿದೆ. ಹಾಗೆಂದರೆ, ವೈಚಾರಿಕ ವಿರೋಧ. ಇದೆಲ್ಲವೂ ಒಂದು ಶೀತಲ ಸಮರದ ತರಹ ಇತ್ತು. ಅಮೆರಿಕ ಮತ್ತು ರಷಿಯಾದ ನಡುವಿನ ಶೀತಲ ಸಮರದಲ್ಲಿ ಏನಾಯಿತೆಂದರೆ, ಅಮೆರಿಕ ತಾನು ಹೇಳುವುದನ್ನೇ ಸಂಪೂರ್ಣ ಸತ್ಯ ಎಂದು ನಂಬಿಸುವ ಮೂಲಕ ಮಾರ್ಕ್ಸ್‌ವಾದದ ಬಗ್ಗೆ ಕಟುವಾದ ವಿರೋಧವನ್ನು ವಿಶ್ವವ್ಯಾಪಿಯಾಗಿ ಸೃಷ್ಟಿಸಿತು. ಕನ್ನಡದ ಬಹುಪಾಲು ನವ್ಯ ಸಾಹಿತಿಗಳು ಈ ಅಮೆರಿಕಾ ಪ್ರಣೀತ ವಿಚಾರಗಳಿಂದ ಅಗತ್ಯಕ್ಕಿಂತ ಹೆಚ್ಚಾಗಿ ಪ್ರಭಾವಿತರಾದರು. ಇದಕ್ಕೆ ಅವರು ಪರ್ಯಾಯ ಆರಿಸಿಕೊಂಡಿದ್ದು ಲೋಹಿಯಾವಾದ. ಆದರೆ, ಅಂಬೇಡ್ಕರ್‌ವಾದವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಅವರು ಕಳೆದುಕೊಂಡರು. ಲೋಹಿಯಾರನ್ನು ಒಳಗೊಳ್ಳುತ್ತಲೇ, ಮಾರ್ಕ್ಸ್ ಮತ್ತು ಅಂಬೇಡ್ಕರ್ ಇಬ್ಬರನ್ನೂ ಹೊರಗಿಡುವ, ಗಾಂಧಿಯ ಬಗೆಗೂ ಅಷ್ಟಾಗಿ ಗಮನಕೊಡದ ಒಂದು ಮನಸ್ಥಿತಿ ಬೆಳೆಸಿಕೊಂಡರು. ತಮ್ಮ ಕೊನೆಗಾಲದಲ್ಲಿ ಇವರಲ್ಲಿ ಕೆಲವರು ಗಾಂಧಿಯ ಬಗ್ಗೆ ಉಗ್ರವಾದ ಮಮತೆಯನ್ನು ತೋರಿಸಿದ್ದೂ ನಿಜ. ಆ ಬದಲಾವಣೆಯನ್ನೇನೂ ನಾನು ಅನುಮಾನಿಸುತ್ತಿಲ್ಲ. ಆದರೆ ಅವರು ಲೋಹಿಯಾರನ್ನೂ ಬಹಳ ಸೀಮಿತವಾಗಿ ಒಳಗೊಂಡರು. ಅವರು 'ಒಳಗೊಂಡಿದ್ದು, ಹೊರಗಿಟ್ಟದ್ದಕ್ಕಿಂತ ಕಮ್ಮಿ ಅನ್ನಿಸ ತೊಡಗಿತು. ಅಂಬೇಡ್ಕರ್, ಗಾಂಧಿ, ಮಾರ್ಕ್ಸ್ ಇವರನ್ನೆಲ್ಲ ಹೊರಗಿಟ್ಟದ್ದರಿಂದ ಉಂಟಾದ ನಷ್ಟಗಳೇನು? ಅಂತ ನಾನು ಯೋಚಿಸತೊಡಗಿದೆ. ಅಲ್ಲದೆ ಆಗ ಮಾರ್ಕ್ಸ್‌ವಾದದ ಹೆಸರಿನಲ್ಲಿ ಕನ್ನಡದೊಳಗೆ ಬರುತ್ತಿದ್ದ ವಿಮರ್ಶೆ ಕೂಡ ಅಷ್ಟೇ ಏಕಮುಖಿಯಾಗಿತ್ತು. ಒಂದುರೀತಿಯ ಡಿಬೇಟರ್ಸ್ ವಾದದ ತರಹ ಇರುತ್ತಿತ್ತು. ನವ್ಯರಲ್ಲಿ ಅನೇಕರು ಪ್ರಗತಿಶೀಲ ಸಾಹಿತ್ಯದ 'ಸಾಮಾನ್ಯ' ಮಾದರಿಗಳನ್ನು ಇಟ್ಟುಕೊಂಡು ಒಟ್ಟು ಪ್ರಗತಿಶೀಲ ಸಾಹಿತ್ಯವನ್ನೇ ನಿರಾಕರಿಸುವ ಕೆಲಸ ಮಾಡಿದರು. ಪ್ರಗತಿಶೀಲತೆ ಸಾಧ್ಯವೇ ಇಲ್ಲ, ಬದಲಾವಣೆ ಸಾಧ್ಯವೇ ಇಲ್ಲ ಅನ್ನುವ ಅತಿರೇಕಕ್ಕೆ ಹೊರಟುಹೋದರು. ನೆರುಡಾ, ಲೋರ್ಕಾ, ಅಚಿಬೆ, ಮಾಯ್ಕೊವಸ್ಕಿ ಮುಂತಾದ ಮಾದರಿಗಳನ್ನು ನವ್ಯರು ಯಾಕೆ ಗಮನಿಸಲಿಲ್ಲ? ಎಡಪಂಥೀಯ ಚಿಂತನೆಯ ಸಂಕುಚಿತವಾದ ಅರ್ಥವ್ಯಾಪ್ತಿಯನ್ನು ಮೀರಿ ಅದನ್ನು ಸಾಂದ್ರವಾಗಿ ನೋಡುವ ಕ್ರಮಗಳು ಯಾಕೆ ಮುನ್ನೆಲೆಗೆ ಬರಲಿಲ್ಲ? ವಿಚಿತ್ರವೆಂದರೆ ನವ್ಯರು ಹೇಳುತ್ತಿದ್ದ ಸಾರ್ತ್ರ್, ಕಾಮೂ, ಕಾಫ್ಕಾ ಅವರ ಬರಹದೊಳಗೇನೆ ಒಂದು ರೀತಿಯ ಎಡಪಂಥೀಯ ವಾದ ಇತ್ತು. ಪ್ರಗತಿಶೀಲತೆ ಇತ್ತು. ನಮ್ಮಲ್ಲನೇಕರು ಬಹಳ ಬೇಗ ನವ್ಯಕ್ಕೆ ಭಿನ್ನಮತೀಯರಾದೆವು. ಹಾಗಂತ ಸೀಮಿತವಾದ ಮಾರ್ಕ್ಸ್‌ವಾದಿ

> ವಿಮರ್ಶಕರಾದವರು ತಮ್ಮ ಒಟ್ಟು ವಿಮರ್ಶೆಯ ಮೂಲಕ ಕೇವಲ ಸಾಹಿತ್ಯದರ್ಶನವನ್ನು ಮಾತ್ರ ಮಾಡುತ್ತಿರುವುದಿಲ್ಲ. ಲೋಕದರ್ಶನವನ್ನೂ ಮಾಡುವ ಸಾಧ್ಯತೆಯಿದೆ ಎಂಬುದನ್ನು ನಂಬಿದಾಗ ವಿಮರ್ಶೆಗೆ ಬೇರೆ ಬೇರೆ ಆಯಾಮಗಳು ಲಭಿಸುತ್ತವೆ.